# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ-4249\2014\ಸನಿಕಾಸ-2 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 19.8.2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ (1)ಶ್ರೀ.ಎಂ.ಎಸ್.ಕಟ್ಟಿಮನಿ, ಕಂದಾಯ ನಿರೀಕ್ಷಕರು, ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ (2)ಶ್ರೀ.ಟಿ.ಕೆ.ಲಮಾಣಿ, ಕಂದಾಯ ನೀರಿಕ್ಷಕರು, ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ (3) ಶ್ರೀ.ರಂಗಪ್ಪ ನಿಂಗಪ್ಪ ಕಂಬಳಿ, ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ, ಕಾತರಕಿ ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ (4) ಶ್ರೀ.ವೆಂಕಟೇಶಗೌಡ, ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ, ಕಾತರಕಿ ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಮತ್ತು (5) ಶ್ರೀ. ಮಹೇಶ ಕರ್ಜಗಿ ಕೆ.ಎ.ಎಸ್., ತಹಶೀಲ್ದಾರ್, ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಮತ್ತು ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

*******

ಶ್ರೀ. ಪರುತಗೌಡ ತಂದೆ ಚಂದನಗೌಡ ಪಾಟೀಲ ಸಾ:: ಹೋಳೆ ಆಲೂರು ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1)ಶ್ರೀ.ಎಂ.ಎಸ್.ಕಟ್ಟಿಮನಿ, ಕಂದಾಯ ನಿರೀಕ್ಷಕರು, ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ (2)ಶ್ರೀ.ಟಿ.ಕೆ.ಲಮಾಣಿ, ಕಂದಾಯ ನೀರಿಕ್ಷಕರು, ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ (3) ಶ್ರೀ.ರಂಗಪ್ಪ ನಿಂಗಪ್ಪ ಕಂಬಳಿ, ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ, ಕಾತರಕಿ ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ (4) ಶ್ರೀ.ವೆಂಕಟೇಶಗೌಡ, ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ, ಕಾತರಕಿ ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ

ಮತ್ತು (5) ಶ್ರೀ. ಮಹೇಶ ಕರ್ಜಗಿ ಕೆ.ಎ.ಎಸ್., ತಹಶೀಲ್ದಾರ್, ಬದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ (ಇನ್ನು ಮುಂದೆ "ಎದುರುದಾರ ನಂ:1, 2, 3, 4 ಮತ್ತು 5" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಬಾದಾಮಿ ತಾಲ್ಲೂಕು ಜಕ್ಕನೂರು ಗ್ರಾಮದ ಸ.ನಂ.22/2ಬ ಕ್ಷೇತ್ರ 4 ಎಕರೆ 34 ಗುಂಟೆ ನೀರಾವರಿ ಜಮೀನು ಇರುತ್ತದೆ. ಇದು ಪರ್ವತಗೌಡ ಚ.ಪಾಟೀಲ್(ದೂರುದಾರ), ಮಲ್ಲಿಕಾರ್ಜುನಗೌಡ ಚ.ಪಾಟೀಲ್, ಶಂಕರಗೌಡ ಯ.ಪಾಟೀಲ್ ಇವರ ಜಂಟಿ ಹೆಸರಿನಲ್ಲಿ ಇರುತ್ತದೆ. ಆದರೆ ಕಾತರಕಿ ಬ್ಯಾಂಕಿನವರು ದೂರುದಾರರ ಹಾಗೂ ಶಂಕರಗೌಡ ಇವರ ಒಪ್ಪಿಗೆ ಇಲ್ಲದೆ ಮಲ್ಲನಗೌಡನಿಗೆ 60,000/- ಗಳು ಹಾಗೂ 3,20,000/- ಗಳ ಸಾಲ ಕೊಟ್ಟಿದ್ದಾರೆ. ಎದುರುದಾರ ನಂ.1 ರಿಂದ 4 ರವರು ಮೇಲ್ಕಾಣಿಸಿದ ಜಮೀನನ್ನು ದೂರುದಾರರ ಒಪ್ಪಿಗೆ ಇಲ್ಲದೆ, ಯಾವುದೇ ನೋಟೀಸು ನೀಡದೆ ಮಲ್ಲನಗೌಡನ ಹೆಸರಿಗೆ ಖಾತೆ ಬದಲಾವಣೆ ಮಾಡಿರುತ್ತಾರೆ. ದೂರುದಾರರು ಹಾಗೂ ಶಂಕರಗೌಡ ಯಾವುದೇ ಕಾಗದ ಪತ್ರಗಳಿಗೆ ಸಹಿ ಮಾಡಿರುವುದಿಲ್ಲ. ಆದರೂ ಸಹ ಎದುರುದಾರರು ಮಲ್ಲನಗೌಡನೊಂದಿಗೆ ಮಿಲಾಪಿಯಾಗಿ ಕೊಟ್ಟ ಸಹಿ ಸೃಷ್ಟಿಸಿ ಎಂ.ಆರ್.ನಂ.6/2010-11 ರ ಪ್ರಕಾರ ಹಕ್ಕು ಬದಲಾವಣೆ ಮಾಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಕೈಗೊಂಡು ನ್ಯಾಯ ದೊರಕಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

3) ಎದುರುದಾರ ನಂ.1 ರವರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ಹಾಗೂ ಮಲ್ಲಿಕಾರ್ಜುನಗೌಡ, ಶಂಕರಗೌಡ ಮೂರೂ ಜನರು ಸೇರಿ ದಿ;25/01/2011 ರಂದು ಬಾಂಡ್ ಪೇಪರ್ ಖರೀದಿಸಿ ಇವರು ಮಲ್ಲಿಕಾರ್ಜುನಗೌಡನ ಹೆಸರಿಗೆ ಸ.ನಂ.22/2ಬ ಜಮೀನನ್ನು ಹಕ್ಕು ಬಿಟ್ಟು ಪತ್ರ ಮಾಡಿದ್ದಾರೆ. ಆ ಪ್ರಕಾರ ಅರ್ಜಿ ಸಲ್ಲಿಸಿದ್ದು ನಂತರ ಸಂಬಂಧಪಟ್ಟವರಿಗೆ ನೋಟೀಸು ನೀಡಿದ್ದು 30 ದಿನಗಳ ಅವಧಿಯಲ್ಲಿ ಯಾವುದೇ ತಕರಾರು ಬರದ ಕಾರಣ ಹಕ್ಕು ಬದಲಾವಣೆ ಮಾಡಲಾಗಿದೆ.

ಆದ್ದರಿಂದ ಇದರಲ್ಲಿ ತಾವು ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲ. ಆದ್ದರಿಂದ ತನ್ನನ್ನು ಆರೋಪ ಮುಕ್ತ ಮಾಡಬೇಕೆಂದು ಕೇಳಿಕೊಂಡಿದ್ದಾರೆ.

4)ಎದುರುದಾರ ನಂ.2 ರವರು ತಮ್ಮ ಆಕ್ಷೇಪಣೆಯಲ್ಲಿ ಎಂ.ಆರ್.ನಂ.6/2010–11 ತಾನು ಕಂದಾಯ ನಿರೀಕ್ಷಕನಾಗಿರುವಾಗ ಮಂಜೂರಿಯಾಗಿರುವುದಿಲ್ಲ. ಆದರೆ ಇವುಗಳು ಎದುರುದಾರ ನಂ.1 ರವರ ಸೇವಾವಧಿಯಲ್ಲಿ ಮಂಜೂರಾಗಿರುತ್ತದೆ. ಆದರೆ ಸ.ನಂ.22/2/ಬ ಕ್ಕೆ ಸಂಬಂಧಿಸಿದಂತೆ ಎಂ.ಆರ್.ನಂ.7ಕ್ಕೆ ದಿ: 15/5/2013 ರ ಪ್ರಕಾರ ಮ್ಯುಟೇಷನ್ ರಚಿತವಾಗಿ ಹಕ್ಕು ಬದಲಾವಣೆ ಆಗಿರುತ್ತದೆ. ಆ ವೇಳೆಯಲ್ಲಿ ನಮೂನೆ 21 ರ ನೋಟೀಸನ್ನು ಹಿತಾಸಕ್ತಿದಾರರಿಗೆ ಜಾರಿಗೊಳಿಸಿ ಯಾವುದೇ ತಕರಾರು ಬರದ ಕಾರಣ ಮ್ಯುಟೇಷನ್ ಮಂಜೂರು ಮಾಡಲಾಗಿದೆ. ಆದ್ದರಿಂದ ತನ್ನನ್ನು ದೋಷಮುಕ್ತನನ್ನಾಗಿ ಮಾಡಬೇಕೆಂದು ಕೇಳಿಕೊಂಡಿದ್ದಾರೆ.

5)ಎದುರುದಾರ ನಂ.3 ರವರು ತಮ್ಮ ಆಕ್ಷೇಪಣೆಯಲ್ಲಿ ತಾನು ದಿ: 01/06/2011 ರಂದು ನಿವೃತ್ತಿ ಹೊಂದಿದ್ದು, ಜಮೀನು ಸ.ನಂ.22/2ಬ ಇದರ ಆಧಾರದ ಮೇಲೆ ದಾಖಲೆಗಳನ್ನು ಪರಿಶೀಲಿಸಿ ಮಾಲೀಕರ ಒಪ್ಪಿಗೆ ಸಹಿಗಳನ್ನು ಪಡೆದುಕೊಂಡು ಸಾಲ ಮಂಜೂರಾತಿ ಕುರಿತು ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಲಾಗಿತ್ತು. ಆ ಪ್ರಕಾರ ಆಡಳಿತ ಮಂಡಳಿಯ ಅನುಮತಿ ಪಡೆದು ಸಾಲ ಮಂಜೂರು ಮಾಡಲಾಗಿದೆ. ಆದ್ದರಿಂದ ದೂರಿನಲ್ಲಿ ಯಾವುದೇ ಹುರುಳಿರುವುದಿಲ್ಲ ಅಂತ ತಿಳಿಸಿದ್ದಾರೆ.

6) ಎದುರುದಾರ ನಂ.4 ರವರು ತಮ್ಮ ಆಕ್ಷೇಪಣೆಯಲ್ಲಿ ಸ.ನಂ.22/2ಬ ಈ ಜಮೀನಿಗೆ ಮೊದಲಿನ ಕಾರ್ಯದರ್ಶಿಗಳು 50,000/– ಗಳ ಬೆಳೆ ಸಾಲ ನೀಡಿದ್ದರು. ಈ ಜಮೀನು ಜಂಟಿಯಾಗಿರುವುದಿಲ್ಲ. ಇನ್ನುಳಿದ ಇಬ್ಬರು ಮಾಲೀಕರ ಒಪ್ಪಿಗೆಯನ್ನು 20/– ರೂ. ಬಾಂಡ್ ಮೇಲೆ ದಿ: 02/09/2011 ರಂದು ನೋಟರಿ ಮಾಡಿಸಿ ಹಾಜರುಪಡಿಸಿದ ನಂತರ ಸಾಲ ಮಂಜೂರು ಮಾಡಲಾಗಿದೆ. ದಿ: 01/08/2011 ರಂದು ಜಮೀನು ದೂರುದಾರರ ಹೆಸರಿನಲ್ಲಿ ಇರಲಿಲ್ಲ. ಅವರು ಒಮ್ಮೆಯೂ ಬ್ಯಾಂಕಿಗೆ ತಕರಾರು ಅರ್ಜಿ ಸಲ್ಲಿಸಿರಲಿಲ್ಲ. ಆದ್ದರಿಂದ ಸದರಿ ದೂರನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

7) ಎದುರುದಾರ ನಂ.5 ರವರು ತಮ್ಮ ಆಕ್ಷೇಪಣೆಯಲ್ಲಿ ಜಮೀನಿನ ಖಾತೆ ಬದಲಾವಣೆಯು ಭೂಮಿ ಶಾಖೆಯಲ್ಲಿ ಸ್ವೀಕೃತಗೊಂಡು ಗಣಕೀಕರಣಗೊಂಡು ಸದರಿ ವಿಷಯ ಕುರಿತು ಸಂಬಂಧಪಟ್ಟವರಿಗೆ ನೋಟೀಸು ಜಾರಿ ಮಾಡಿ ತಕರಾರು ಇದ್ದಾಗ ಮಾತ್ರ ಅದನ್ನು ತಕರಾರು ಪ್ರಕರಣವೆಂದು ಪರಿಗಣಿಸಿ ತಮ್ಮ ಮುಂದೆ ವಿಚಾರಣೆಗೆ ಬರುತ್ತದೆ. 30 ದಿನಗಳೊಳಗಾಗಿ ಯಾವುದೇ ತಕರಾರು ಬರದಿದ್ದಾಗ ಭೂಮಿ ಶಾಖೆಯಲ್ಲಿಯೇ ಜಮೀನಿನ ಖಾತೆ ವರ್ಗಾವಣೆಗೊಂಡು ಕಂದಾಯ ನಿರೀಕ್ಷಕ, ಶಿರಸ್ತೆದಾರರ ಅಂತಿಮ ಅನುಮೋದನೆಯೊಂದಿಗೆ ಕೊನೆಗೊಳ್ಳುತ್ತದೆ. ಆದ್ದರಿಂದ ಈ ಪ್ರಕರಣದ ಬಗ್ಗೆ ತಾನು ಯಾವುದೇ ತಪ್ಪು ಮಾಡಿರುವುದಿಲ್ಲ. ಆದ್ದರಿಂದ ಇದೊಂದು ಸುಳ್ಳು ದೂರು ದಾಖಲಿಸಿರುವುದರಿಂದ ಇದನ್ನು ವಜಾಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

8) ದೂರುದಾರರಿಗೆ ಪ್ರತ್ಯುತ್ತರ ಸಲ್ಲಿಸಲು ಸಾಕಷ್ಟು ಕಾಲಾವಕಾಶ ನೀಡಿದರೂ ಪ್ರತ್ಯುತ್ತರ ಸಲ್ಲಿಸದ ಕಾರಣ ದೂರುದಾರರ ಪ್ರತ್ಯುತ್ತರ ಇಲ್ಲವೆಂದು ಪರಿಗಣಿಸಲಾಯಿತು.

9) ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ)"ಜಕ್ಕನೂರು ಗ್ರಾಮದ ಸ.ನಂ.22/2ಬ ಕ್ಷೇತ್ರ 4 ಎಕರೆ 34 ಗುಂಟೆ ಇದು ದೂರುದಾರ ಪರ್ವತಗೌಡ, ಅವರ ಸಹೋದರ ಮಲ್ಲಿಕಾರ್ಜುನಗೌಡ ಹಾಗೂ ಅಣ್ಣನ ಮಗ ಶಂಕರಗೌಡ ಇವರ ಜಂಟಿ ಹೆಸರಿನಲ್ಲಿ ಇರುವುದು ಕಂಡು ಬರುತ್ತದೆ. ಆದರೆ ಸದರಿ ಜಮೀನನ್ನು ದಿನಾಂಕ: 28/05/2011 ರಂದು 20/- ರೂ. ಬಾಂಡ್ ಮೇಲೆ ಪರ್ವತಗೌಡ ಹಾಗೂ ಶಂಕರಗೌಡ ಇವರು ಮಲ್ಲಿಕಾರ್ಜುನ ಗೌಡನಿಗೆ ಹಕ್ಕು ಬಿಟ್ಟು ಪತ್ರ ಮಾಡಿಕೊಟ್ಟಿದ್ದಾರೆ ಎನ್ನುವಂತೆ ಇದರಲ್ಲಿ ಬರೆಯಲಾಗಿದೆ. ಇವರು ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು ಪ್ರೀತಿ ವಿಶ್ವಾಸದ ದ್ಯೋತಕವಾಗಿ, ಸವಿನೆನಪಿಗಾಗಿ ದೂರುದಾರರು ಹಾಗೂ ಶಂಕರಗೌಡ ಈ ಜಮೀನಿನ ಹಕ್ಕು ಬಿಟ್ಟು ಪತ್ರ ಮಾಡಿಕೊಟ್ಟಿದ್ದಾರೆ ಅಂತ ಬರೆಯಲಾಗಿದೆ. ಆದರೆ ಈ ಹಕ್ಕು ಬಿಟ್ಟು ಪತ್ರ ನೋಂದಣಿಯಾಗಿರುವುದಿಲ್ಲ.

ಆ) ದೂರುದಾರರ ಪ್ರಕಾರ ತಾವು ಯಾವುದೇ ಸಹಿ ಮಾಡಿರುವುದಿಲ್ಲ ಹಾಗೂ ಜಮೀನನ್ನು ಮಲ್ಲಿಕಾರ್ಜುನ ಗೌಡನಿಗೆ ಬಿಟ್ಟು ಕೊಟ್ಟಿರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಮಲ್ಲಿಕಾರ್ಜುನಗೌಡ ಇದೇ ಹಕ್ಕು ಬಿಟ್ಟು ಪತ್ರದ ಆಧಾರದ ಮೇಲೆ ಎಂ.ಆರ್.ನಂ.10/2010-11 ರಂತೆ ತನ್ನ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದಾರೆ ಅಂತ ಕಂಡು ಬರುತ್ತದೆ. ಇದರ ಆಧಾರದ ಮೇಲೆ ಎದುರುದಾರರು ಮಲ್ಲನಗೌಡನ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಿ ಆತನ ಹೆಸರಿನಲ್ಲಿ ಪಹಣಿ ಪತ್ರಿಕೆಯಲ್ಲಿ ಹೆಸರು ನಮೂದಿಸಿದ್ದಾರೆ. ಈ ಆಧಾರದ ಮೇಲೆಯೇ ಮಲ್ಲಿಕಾರ್ಜುನಗೌಡ ಈ ಜಮೀನಿನ ಮೇಲೆ ಸಾಲ ಪಡೆದಿರುತ್ತಾರೆ.

ಇ) ದೂರುದಾರರು ತಾವು ಜಮೀನನ್ನು ಮಲ್ಲನಗೌಡನಿಗೆ ಬಿಟ್ಟುಕೊಟ್ಟಿರುವುದಿಲ್ಲವೆಂದು ದೂರು ನೀಡಿದ್ದು, ಇದನ್ನು ಗಮನಿಸಿದಾಗ ಎದುರುದಾರ ನಂ.1, 2 ಹಾಗೂ 5 ರವರು ಕೇವಲ 20/- ರೂ. ಬಾಂಡ್ ಪೇಪರ್ ಮೇಲೆ ಹಕ್ಕು ಬಿಟ್ಟು ಪತ್ರ ಮಾಡಿಕೊಂಡು ಬಂದಾಗ ಆ ಆಧಾರದ ಮೇಲೆ ಹಕ್ಕು ಬದಲಾವಣೆ ಮಾಡಿ ಕರ್ತವ್ಯಚ್ಯುತಿ ಎಸಗಿದ್ದಾರೆಂದು ಕಂಡು ಬರುತ್ತದೆ. ಈ ಹಕ್ಕುಬದಲಾವಣೆಗೆ ಮಲ್ಲನಗೌಡ ಅರ್ಜಿ ಸಲ್ಲಿಸಿದಾಗ ಆ ಹಕು ಬಿಟ್ಟು ಪತ್ರದ ಅಂಶಗಳನ್ನು ಪರಿಗಣಿಸಿ ಹಾಗೂ ದಾಖಲೆಯು ನೋಂದಣಿಯಾಗದ ಕಾರಣ ಹಕ್ಕು ಬದಲಾವಣೆ ಮಾಡುವುದನ್ನು ತಡೆ ಹಿಡಿಯಬಹುದಾಗಿತ್ತು. ಎದುರುದಾರ ನಂ.5 ರವರು ಬಾದಾಮಿ ತಾಲ್ಲೂಕಿನ ತಹಸೀಲ್ದಾರ್ ಆಗಿದ್ದು ಭೂಮಿ ತಂತ್ರಾಂಶದ ಅಧಿಕಾರಿಗಳು ಮಾಡಿದ ತಪ್ಪಿಗೆ ಅವರೂ ಸಹ ಇಲಾಖೆಯ ಮೇಲಾಧಿಕಾರಿಗಳಾಗಿ ಹೊಣೆಗಾರರಾಗಬೇಕಾಗುತ್ತದೆ. 4 ಎಕರೆ 35 ಗುಂಟೆ ಜಮೀನನ್ನು ಕೇವಲ ಸವಿನೆನಪಿಗಾಗಿ ಹಕ್ಕು ಬಿಟ್ಟು ಪತ್ರ ಮಾಡಿ ಕೊಟ್ಟಿದ್ದಾರೆ ಅಂತ ಬರೆದ ದಾಖಲೆಯನ್ನು ತಂದಾಗ ಅದನ್ನು ಎದುರುದಾರ ನಂ.1, 2 ರವರು ಆಗಲೇ ತಿರಸ್ಕರಿಸಬೇಕಾಗಿತ್ತು. ಆದರೆ ಅದನ್ನು ಮಾಡದೇ ಇರುವುದರಿಂದ ದೂರುದಾರರಿಗೆ ಅವರ ಜಮೀನು ಹಕ್ಕು ಬದಲಾವಣೆಯಾಗಿರುತ್ತದೆ.

ಈ) ಎದುರುದಾರ ನಂ.3 ಮತ್ತು 4 ರವರು ಈ ಜಮೀನಿನ ಮೇಲೆ ಸಾಲ ಕೊಟ್ಟಿದ್ದಾಗಿ ಒಪ್ಪಿಕೊಂಡಿದ್ದಾರೆ. ಇವರು ಸಾಲ ನೀಡುವ ಪೂರ್ವದಲ್ಲಿ ಈ ಜಮೀನುಗಳ ಎಲ್ಲ ದಾಖಲೆಗಳನ್ನು ಪಡೆದು ಸಂಬಂಧಿಸಿದ ಎಲ್ಲ ಮಾಲೀಕರ ಹೆಸರಿನಲ್ಲಿ ಸಾಲ ಮಂಜೂರು

**ಮಾಡಬೇಕಾಗುತ್ತದೆ. ಆದರೆ ಹಿಂದಿನ ದಾಖಲೆಗಳನ್ನು ಪರಿಶೀಲಿಸದೆ ಕೇವಲ ಮಲ್ಲಿಕಾರ್ಜುನ ಗೌಡನ ಹೆಸರಿನಲ್ಲಿ ಭೂಮಿ ಇರುವುದರಿಂದ ಅವರಿಗೆ ದೊಡ್ಡ ಮೊತ್ತದ ಸಾಲ ಮಂಜೂರು ಮಾಡಿ ಇದರಿಂದ ದೂರುದಾರ ಹಾಗೂ ಇನ್ನೊಬ್ಬ ಮಾಲೀಕ ಶಂಕರಗೌಡ ಇವರಿಗೆ ನಷ್ಟ ಅನುಭವಿಸುವಂತೆ ಮಾಡಿದ್ದಾರೆ. ಆದ್ದರಿಂದ ಮೇಲಿನ ಅಂಶಗಳ ಆಧಾರದ ಮೇಲೆ ಎದುರುದಾರರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ತೋರಿ ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ.”**

10. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1 ರಿಂದ 5ನೇ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

11. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 5ನೇ ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಎದುರುದಾರ ನಂ;3 ಮತ್ತು 4ರವರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಕಾತರ್ಕಿಯ ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸಿದ್ದಾರೆ ಇವರ ವಿರುದ್ಧ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು ಸಮಂಜಸವೆಂದು ಅಭಿಪ್ರಾಯಪಟ್ಟು ಹಾಗೂ ಎದುರುದಾರ ನಂ:1,2 ಮತ್ತು 5ರವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ

ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 2ನೇ ಎದುರುದಾರರು ದಿನಾಂಕ:30/05/2015ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ, ಕೆಸಿಎಸ್‌ಆರ್ ನಿಯಮ 214(2)(ಬಿ)(೧)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ 1, 2 ಮತ್ತು 5ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

13. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 2ನೇ ಎದುರುದಾರರು ದಿನಾಂಕ:30/05/15ರಂದು ನಿವೃತ್ತಿ ಹೊಂದಿದ್ದಾರೆ.

N. Anand 19/8

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು-1,
ಕರ್ನಾಟಕ ರಾಜ್ಯ.

19/8